ಆದಕಾರಣ ರಾಜ್ಯದಲ್ಲಿ ಈ ಬೆಳೆ ಬೆಳೆದಾಗ ಯಾವ ತೊಂದರೆಗಳೂ ಆಗುವುದಿಲ್ಲವೆಂದು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದರ ಮೇರೆಗೆ ಬಿ.ಟಿ.ಹತ್ತಿಯನ್ನು ರಾಜ್ಯದಲ್ಲಿ ಬೆಳೆಯಲು ಕೇಂದ್ರ ಸರ್ಕಾರವು ಅನುಮತಿ ನೀಡಿರುತ್ತದೆ. ಬಿ.ಟಿ.ಹತ್ತಿಯು ರೈತರಿಗೆ ಅನುಕೂಲವೆಂದು ಸರ್ಕಾರ ಭಾವಿಸಿದೆ.

ಈ. ಕೇಂದ್ರ ಸರ್ಕಾರವು ಬಿ.ಟಿ.ಹತ್ತಿ ಬೆಳೆಯಲು ಅನುಮತಿ ನೀಡಿರುವ ಮೇರೆಗೆ ಮಹಿಕೂಮಾನ್ಸಾಂಟೊ ಅಭಿವೃದ್ಧಿ ಪಡಿಸಿರುವ ಬಿ.ಟಿ.ತಳಿಗಳಾದ ಎಂ.ಇ.ಸಿ.ಹೆಚ್-162, ಮತ್ತು ಎಂ.ಇ.ಸಿ.ಹೆಚ್-184 ತಳಿಗಳನ್ನು ಆಯ್ದ 12 ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಸದರಿ ಬೆಳೆಯನ್ನು ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿಗಳನ್ವಯ ಬೆಳೆಯುವಂತೆ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ಆಡಳಿತ ವರ್ಗಕ್ಕೆ ಆದೇಶ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರ ಸರ್ಕಾರವು ನೀಡುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

ರಾಜ್ಯದಲ್ಲಿ ನೀರಾ ಇಳಿಸಲು ಅನುಮತಿ

210 (545)- ಶ್ರೀ ಮಹದೇವಪ್ರಸಾದ್ ಹೆಚ್.ಎಸ್(ಗುಂಡ್ಲಪೇಟೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತೆಂಗಿನ ಮರಗಳಿಂದ ನೀರಾ ಇಳಿಸಲು ಅನುಮತಿ ನೀಡಲು ಉದ್ದೇಶಿಸಲಾಗಿದೆಯೇ?

ಆ. ಉದ್ದೇಶಿಸಿದ್ದರೆ ನೀರಾ ಸಂಸ್ಕರಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

ಅ. ರೈತರ ಸಹಕಾರ ಸಂಘಗಳ ಮತಿಯಿಂದ ನೀರಾವನ್ನು ಇಳಿಸಿ ನೀರಾ ರೂಪದಲ್ಲೇ ಮಾರಾಟ ಮಾಡುವಂತೆ ಅವಕಾಶ ಕಲ್ಪಿಸಲು ಘೋಷಿಸಲಾಗಿದೆ.

ಆ. ನೀರಾ ಇಳಿಸುವ ತಾಂತ್ರಿಕತೆ ಹಾಗೂ ಸಂಸ್ಕರಣೆ ಬಗ್ಗೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ ಹಾಗೂ ರಕ್ಷಣಾ ಆಹಾರ ಸಂಶೋಧನಾ ಸಂಸ್ಥೆ ಮೈಸೂರು ಇವರಿಗೆ ರೂ. 11.86 ಲಕ್ಷ ಅನುದಾನವನ್ನು ನೀಡಲಾಗಿದೆ. ಸಂಶೋಧನೆ ಪ್ರಗತಿಯಲ್ಲಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕಲಿಕಾ ಕೇಂದ್ರಗಳು

177 (1405)- ಶ್ರೀ ಶಿವಶರಣಪ್ಪ ಗೌಡ ಪಾಟೀಲ್ (ಯಲ್‌ಬುರ್ಗಾ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊಪ್ಪಳ ಜಿಲ್ಲೆಯಲ್ಲಿ ಮುಂದ್ರವರೆದ ಶಿಕ್ಷಣ ಕಲಿಕಾ ಕೇಂದ್ರಗಳಲ್ಲಿ ಅವಶ್ಯಕ ಸಾಮಗ್ರಿಗಳ ಖರೀದಿಯಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಯಾವ ಸಂಸ್ಥೆಗಳು ಯಾವ ಯಾವ ಸಾಮಗ್ರಿಗಳನ್ನು ಪೂರೈಸಿರುವರು: ಒಟ್ಟು ಮೊತ್ತ ಎಷ್ಟು?

ಇ. ಖರೀದಿಸಿರುವಾಗ ಸರ್ಕಾರದ ನಿಯಮಗಳನ್ನು ಪಾಲಿಸಿರುವರೇ?

ಈ. ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಅಥವಾ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ?